ಪಡ ಕೇಳ್ದನಪ'. ಮುಂದಿನದು ಪದ್ಮಾವತಿ ಹೇಳಿದರೆ ಹೇಳಲಿ ಎಂಬಂತಿತ್ತು ಅವಳ ಭಾವ. 'ನಿನ್ನ ಪಟ್ಟಕ್ಕೂ ಗೊತ್ತಾಜು ಹೇಳ ಆತು. ಅದೇಯ ಸುಬ್ಬಿ ಮಗಳು ಮೀನಾಕ್ಷಿ ಅದ ಯಾರನೊ ಕಟ್ಟಕಂಡು ವೋಡ ಹೋಯ್ತುಡ. ಬಸ್ ಸ್ಟಾಂಡಲ್ಲಿ ಗುರ್ತ ಆದವ್ನಡ. ಈ ಮಳ್ಳ ಮಕ್ಕೋಗೆ ಯಂತ ಹೇಳವು. ಕಡೀಗೆ ಕಣ್ಣೀರ ಹಾಕ್ತೊ. ಕಡೀಗೆ ಬುದ್ಧೀ ಹೇಳಿ ಕರಕ ಬಂದು ವಾಲ್ಗಾನೂ ಊದಾತಡಪ. ಕವಳೀಗದ್ದೆ ಶಂಭೂಗೆ ಕೊಟ್ಟು ಅದ ಯಂತದೊ ರಜಿಸ್ಟ್ರೀ ಮಾಡಿದ್ವಡಪ. ಸುಬ್ಬಿಗೆ ಯಮ್ಮನೆ ರಾಶಿ ಹತ್ರವಲೆ ಹಾಂಗಾಗಿ ಯನ್ನ ಪಟ್ಟಕ್ಕೂ ಗೊತ್ತಾತು' ಎಂದಳು ಪದ್ಮಾವತಿ. 'ಪದ್ದಕ್ಕಯ್ಯಾ ವಳಗೆ ಶಿವರಾಮ ಬಾವ ಆವಾಗಿಂದ ಕರೀತಿದ್ದ. ನಿಂಗೊ ಯಂತ ಪಂಚಾತ್ಗೆ ಹಚ್ಕ ಕುಂತಿದ್ರಿ' ಎಂದಾಗ, ಆ ಗಡಿಬಿಡಿಯಲ್ಲಿಯೂ ಪದ್ಮಾವತಿ 'ಗಂಗೆ ಈ ಸುದ್ದಿ ನಿನ್ನತ್ರೆ ಇರ್ಲೀ. ಆ ದೇವ್ರ ಇಚ್ಛೆ. ಯಾರೀಗ ಯಾರ ಗಂಟ ಹಾಕ್ತನನ.' ಎನ್ನುತ್ತಾ ಒಳಗೆ ಹೋದಳು. ಅವಳಿಗೆ ಕೇಳುವಂತೆ ' ಈಗ ವಂದ್ ತೊವೆ, ಮಗೆಕಾಯ ಗೊಜ್ಜು ಮಾಡ್ತೆ, ಅಷ್ಟೆ ಸಾಕು . ರಾತ್ರೆ ಹೊತ್ತಲೆ ಯಷ್ಟ ಜನ್ರ ಅಂದಾಜು, ಎನ್ನುತ್ತಾ ಕುದಿಯುವ ಎಸರಿಗೆ ಹೆಸರು ಬೇಳೆ ಹೊಯ್ದಳು.

ಗಂಗೆಯ ಗಂಡ ಸಾಕ್ಷಾತ್ ದೇವರು. ಆದರೂ ಗತಿಯಿಲ್ಲ. ಕಲ್ಲು ಗುಂಡಿನಂತಾ ಮಗನಿದ್ದಾನೆ. ಕೆಲಸವಿಲ್ಲದೇ ತಿರುಗುತ್ತಾನೆ. ತನ್ನೊಟ್ಟಿಗೆ ಅಡಿಗೆ ಕೆಲಸಕ್ಕಾದರೂ ಬಾ ಎಂದರೆ ಒಲ್ಲ. ಮರ್ಯಾದಿಯಂತೆ. ಈಗ ಬೆಂಗಳೂರಲ್ಲಿ ಹೋಟೇಲಲ್ಲಿ ಅದೇ ಚಾಕರಿ. ಅವನಿಗೇನೋ ಓದುವ ಮನಸ್ಸಿತ್ತು. ಬುದ್ಧಿಯೂ ಇತ್ತು. ಆದರೆ, ಗಂಗೆಯ ಕೈ ಸಾಗಬೇಕಲ್ಲ. ಎರಡು ಹೊತ್ತಿನ ಊಟಕ್ಕೆ ತತ್ವಾರ. ಹೋಗುವಾಗ ಜಗಳವಾಡಿಯೇ ಹೋದ. 'ಎಲ್ಲಾದರೂ ಸುಖವಾಗಿರಲಿ' ಎಂದು ಕಳಿಸಿದ್ದಳು. 'ಗಂಗೂ ಆತನೇ ಅಡಿಗೆ, ಬಾಳೆ ಹಾಕಲು ಹೇಳಲೇ' ಎಂದು ಪದ್ಮಾವತಿ ಕೂಗಿದಳು. ಗಂಗೆ ಗಡಿಬಿಡಿಯಿಂದ ತೊವೆಗೆ ಸುಂಟಿ ಜಜ್ಜಿ ಹಾಕಿ, ಗಡದ್ದಾಗಿ ಒಂದು ಇಂಗು ಕರಿಬೇವಿನ ಒಗ್ಗರಣೆ ಕೊಟ್ಟಳು.

ನಾಳೆ ಕಡಿಮೆ ಎಂದರೂ ಸುಮಾರು ಎಂಟು ನೂರು ಜನರ ಅಂದಾಜು ಎಂದು ಶಿವರಾಮ ಹೇಳಿದ್ದ. ನಾಳಿನ ಅಡಿಗೆಯವರೂ ಬಂದು ಕೆಲಸ ಶುರು ಮಾಡಿಕೊಂಡಿದ್ದರಿಂದ ಗಂಗೆಗೆ ಕೈ ಬಿಡುವಾಗಿತ್ತು. ಆಗಾಗ ಕುಂತು ಎದ್ದು ಮಾಡುವಾಗ ಸಣ್ಣಗೆ ನರಳುವ ಗಂಗೆಯನ್ನು ಗಮನಿಸುತ್ತಲೇ ಬಂದಿದ್ದಾಳೆ ಸುಬ್ಬಿ. ಆದರೂ ಅವಳಾಗೇ ಹೇಳಲಿ, ಅವಳ ಬಾಯಿಂದಲೇ ಬರಲಿ ಎಂದು ಸುಮ್ಮನಿದ್ದಳು. ಕಡೆಗೂ ತಡೆಯಲಾರದೇ ಕೇಳಿಯೇ ಬಿಟ್ಟಳು ' ಗಂಗತ್ತೇ ಯಂತ ಆತೆ, ಹೇಳಕಂಡ್ರೆ ಹನಿ ಹಗೂರಾಗ್ತೆ' ಎಂದಿದ್ದೇ ತಡ ಗಂಗೆಗೆ ತಡೆಯಲಾಗಲಿಲ್ಲ, ಅಷ್ಟೊತ್ತಿಂದ ತಡೆದ ದುಃಖದ ಕಟ್ಟೆಒಡೆಯಿತು. 'ಯಂದು ಯಾವಾಗೂ ವಂದೇ ಸೊಳೆ ರಾಗ, ಇದ್ದಿದ್ದೇಯ.' ಇದು ನೋಡು ಇವತ್ತಿಂದು. ಆನು ಖರೆ ಅಂದ್ರೆ ನಿನ್ನೇನೆ ಬಪ್ಪವ. ನಿನ್ನೆ ಇವ್ರ ಸವಾರಿ ಮನೇಗ್ ಬಂತೊ ಯನ್ಗೆ ಬಪ್ಲೇ ಆಜಿಲ್ಲೆ. ಅಪ್ರೂಪಕ್ಕೆ ಮನೇಗ್ ಬಂಜೊ ಹೇಳಿ ಖುಶಿ ಅಪ್ಪದಕ್ಕಿಂತ ಯಲ್ಲಾರು ವೋಡ ಹೋಪ ಕಾಣ್ತೆ. ಯನ್ನ ಪರಿಸ್ಥಿತಿ ನೋಡು,' ಎನ್ನುತ್ತಾ ಮೊಳಕಾಲಿನ ಸೀರೆ ಸರಿಸಿ ತೋರಿಸಿದಳು. ಮೊಳಕಾಲಿನ ಕೆಳಗೆ ಕೆಂಪು ಕನ್ನೆತ್ತರಗಟ್ಟಿ ಆಗಿತ್ತು.ಸುಬ್ಬಿ 'ಅಯ್ಯೋ ಗಂಗಕ್ಕಾ' ಅನ್ನುವಷ್ಟರಲ್ಲಿ ಬಡಿಸುವ ಹುಡುಗರು ಬಂದು ಮುತ್ತಿದರು. ಗಂಗೆಯ ನೋವು ಮರೆತೇ ಹೋಯಿತು. ಬಡಿಸುವವರಿಗೆ ಎಲ್ಲವನ್ನೂ ತೋಡಿ ಕೊಡುವದರಲ್ಲಿ ಇಬ್ಬರಿಗೂ ಸುದ್ದಿ ಎಲ್ಲಿಯವರೆಗೆ ಬಂದಿತ್ತು ಎನ್ನುವದು ಮರೆತೇ ಹೋಯಿತು. ಇನ್ನೇನು ಮೊದಲ ಪಂಕ್ತಿ ಊಟ ಮುಗಿಯುವವರೆಗೆ ದಣಿವಾರಿಸಿಕೊಳ್ಳಬೇಕು ಎನ್ನುವಷ್ಟರಲ್ಲಿ ಮೀನಾಕ್ಷಿ ಅಂಗಳದ ಮೂಲೆಯಲ್ಲಿ ತಟ್ಟಿಯ ಆಚೆಬದಿಗೆ ಪಿಸು ಮಾತಾಡುತ್ತಿದ್ದ ವಿನಾಯಕನನ್ನು ತೋರಿಸಿದಳು. ಅವನು ಎತ್ತರವಾಗಿದ್ದರಿಂದ ಅವನ ಮುಖ ಸರಿಯಾಗಿ ಕಾಣುತ್ತಿತ್ತು. 'ಅರೆ ಬಾಳೆಗುಂಡಿ ವಿನಾಯಕ. ಅದ್ ಯಾರು ತಡಿ ತಡಿ ಸರ್‍ರಾಗಿ ಕಾಣ್ತಿಲ್ಲೆ,ತಡಿ ಮಾಡ್ತೆ, ಎನ್ನುತ್ತಾ ಮೆಟ್ಟುಗತ್ತಿಯ ಮೇಲೆ ಹತ್ತಿ ನಿಂತಳು. ಒಹೋ ಕಲ್ಲಮನೆ ಸುಜಾತಾ.ಹೌದೆ ಅದೇಯ' ಎನ್ನುವಷ್ಟರಲ್ಲಿ 'ಯಂತ ಪತ್ತೆದಾರೀ ಮಾಡ್ತ್ಯ ಮಾತಾಡಕಳ್ಲಿ ಬಿಡೆ. ನಾಳೆ ಮದ್ವೆ ಅಕ್ಕು. ಕರದ್ರೆ ಆನೂ ನೀನು ಹೋಪ' ಎಂದಳು ಗಂಗೆ. ಗಂಗೆಯ ನೀರಸ ಪ್ರತಿಕ್ರಿಯೆ ಮೀನಾಕ್ಷಿಗೆ ಹಿಡಿಸಲಿಲ್ಲ.'ಹೌದೆ ಮದ್ವೆ ಯಾರೂ ಕಂಡವ್ವೆ ಅಲ್ಲ. ಇವ್ರದ್ದೆಂತಾ ಹೊಸಾದು. ತಡಿ ತಡಿ ಏನೋ ಮಜ್ಕೂರ್ ಇದ್ದು' ಎನ್ನುತ್ತಾ ಪೂರಾ ಪತ್ತೇದಾರಿಗೇ ಹೊರಟಳು.ಯಾರೂ ಇಲ್ಲ ಎಂದು ಎಣಿಸಿ ಗಂಗೆ ಶುರು ಮಾಡಿಕೊಂಡಳು. 'ಅವ್ವು ಮನೆಗ್ ಬಪ್ಪೂದೆ